# ರಂಜಾನ್ ಶುಭ ಕೋರುವ ಆರ್ಕಿಡ್





■ ಚಿತ್ರ– ಬರಹ: **ಪುಟ್ಟರಾಜು ಕೈಗಾ**

**ಈ** ವರ್ಷ ಪಶ್ಚಿಮ ಘಟ್ಟದಲ್ಲಿ ಮಳೆಗಾಲ ಬೇಗನೆ ಶುರುವಾಗಿದೆ. ರಂಜಾನ್ ಉಪವಾಸದ ತಿಂಗಳು ಕೂಡ ಇದೇ ಮೇ ನಲ್ಲಿ ಶುರುವಾಗಿದೆ. ಹುಬ್ಬಳ್ಳಿಗೆ ಕಾರ್ ಸರ್ವಿಸ್‌ಗೆಂದು ಹೋದಾಗ ಮಿತ್ರ ಶೇಕ್ ಅಹಮದ್ ಅಲಿಯನ್ನು ಭೇಟಿಯಾಗಿದ್ದೆ. 'ಈ ಸಲ ದೇವರ ದಯೆಯಿಂದ ಹವಾಮಾನ ಉತ್ತಮವಾಗಿದೆ. ಮಳೆ ಬಂದರೆ ಇನ್ನೂ ಒಳ್ಳೆಯದು' ಎಂದ. ಸಂಜೆ ಧಾರವಾಡ, ಹಳಿಯಾಳದ ಮುಖಾಂತರ ಇನ್ನೂ ದಾಂಡೇಲಿ ತಲುಪಿಲ್ಲ, ಮಳೆ ಶುರುವಾಯಿತು. ದಾಂಡೇಲಿ, ಜೋಯಿಡಾ ತಲುಪಿದಾಗ ಮಳೆಯ ರಭಸ ಇನ್ನೂ ಹೆಚ್ಚಾಯಿತು. ಅನಶಿ ರಾಷ್ಟ್ರೀಯ ಉದ್ಯಾನವನದವರೆಗೂ ಚೆನ್ನಾಗಿ ಮಳೆ.

ಚೈತ್ರ ಮಾಸದ ನಂತರ ಬಂದ ಮೊದಲ ಹಬ್ಬವೇ ರಂಜಾನ್. ವಾರದ ನಂತರ ಕ್ಯಾಮೆರಾ ಹಿಡಿದು, ಮೊದಲ ಮಳೆಗೆ ಪ್ರಕೃತಿಯಲ್ಲಿ ಏನೆಲ್ಲ ಅರಳಿದೆಯೋ ನೋಡೋಣವೆಂದು ಹೊರಟೆ. ಸಸ್ಯಲೋಕದ ಮನ್ಮಥ ಹೂವಾದ ಆರ್ಕಿಡ್ ದರ್ಶನ ಎಲ್ಲೆಲ್ಲೂ ಆಯಿತು. ಪ್ರತಿ ಸಲವೂ ಮಳೆ ಶುರುವಾದರೆ ಪಶ್ಚಿಮ ಘಟ್ಟದೆಲ್ಲೆಡೆ ಆರ್ಕಿಡ್ ಹೂ ರಾರಾಜಿಸುತ್ತದೆ. ರಂಜಾನ್ ಮಾಸಕ್ಕೆ ಶುಭ ಹಾರೈಸಲೆಂಬಂತೆ, ಗುಲಾಬಿ, ಶ್ವೇತ , ಪಿಂಕ್, ಪರ್ಪಲ್ ಬಣ್ಣದಲ್ಲಿ ಹೂಗೊಂಚಲು ನಳನಳಿಸುತ್ತಿತ್ತು.

ಈ ಆರ್ಕಿಡ್‌ನಿಂದ ಹತ್ತಾರು ಉಪಯೋಗಗಳಿವೆ. ಔಷಧಿಯಾಗಿ, ಐಷಾರಾಮಿ ಹೋಟೆಲ್, ಮದುವೆ ಮಂಟಪದ ಅಲಂಕಾರಕ್ಕೆ, ಪ್ರೇಮಿಗಳ ಪ್ರೀತಿ ನಿವೇದನೆಗೆ, ಅಷ್ಟೇ ಅಲ್ಲ. ಅಡುಗೆ ಕೋಣೆಯಲ್ಲಿ ಕೇಕ್ ಮಾಡಲೂ ಇದು ಬೇಕು. ಐಸ್ ಕ್ರೀಮ್‌ನಲ್ಲಿ ಬಳಕೆಯಾಗುವ ವೆನಿಲ ಕೂಡ ಒಂದು ಬಗೆಯ ಆರ್ಕಿಡ್ ಎಂದರೆ ನಿಮಗೆ ಆಶ್ಚರ್ಯವಾಗಬಹುದು.

ಗುಲಾಬಿ ಆರ್ಕಿಡ್ ವಾತ್ಸಲ್ಯವನ್ನು ಸಂಕೇತಿಸಿದರೆ, ಶ್ವೇತ ವರ್ಣದ ಆರ್ಕಿಡ್ ಪರಿಶುದ್ಧತೆಯನ್ನು, ಕೆಂಪು ಬಣ್ಣದ ಆರ್ಕಿಡ್ ಪ್ರೀತಿ ಮತ್ತು ಹೊಂದಾಣಿಕೆಯನ್ನು ಪ್ರತಿನಿಧಿಸುತ್ತದೆ. ಅರಳಿದ ನಂತರ ಬಹುದಿನಗಳ ಕಾಲ ಬಾಡುವುದಿಲ್ಲ. ಬಣ್ಣವೂ ಮಾಸುವುದಿಲ್ಲ.